2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಸತ್ರ ಮೊಕದ್ದಮೆ ಸಂಖ್ಯೆ: 48/2013

| | | | |
|---|---|---|---|
| ಹೆಸರು | ಃ | ಯು. ಶರಣಪ್ಪ | ಫ್ರಾಸಾ-04 |
| ತಂದೆಯ ಹೆಸರು | ಃ | ಚನ್ನಬಸಪ್ಪ | ಚಾಸಾ-24 |
| ವಯಸ್ಸು | ಃ | 62 ವರ್ಷ | |
| ಉದ್ಯೋಗ | ಃ | ನಿವೃತ್ತ ಎಸ್.ಪಿ. | |
| ವಾಸಸ್ಥಳ | ಃ | ಆದಾಪೂರ, ಜಿಃ ಕೊಪ್ಪಳ | |

ದಿನಾಂಕಃ 28-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

## ಸಾಕ್ಷಿಯ ವಿಚಾರಣೆಃ ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ

### ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ

ಜುಲೈ 2011 ರಿಂದ ಸೆಪ್ಟೆಂಬರ್ 2013 ರವರೆಗೆ ಸಿ.ಪಿ.ಐ., ಹುನಗುಂದ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 28-10-2011 ರಂದು ಇಲಕಲ್ಲ ಪಿ.ಎಸ್.ಐ., ರವರಿಂದ ತನಿಖೆಯನ್ನು ವಹಿಸಿಕೊಂಡು, ಗುನ್ನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ-2 ಮತ್ತು 3 ಇವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿ, ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತಾ ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಮುದ್ದೆಮಾಲು-1 ಬಡಿಗೆಯನ್ನು ಜಪ್ತಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಕಾಲಕ್ಕೆ ತಯಾರಿಸಿದ ಕಚ್ಚಾ ನಕಾಶೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಅಂತಾ ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಈಗ ನೋಡುತ್ತಿರುವ ನಾಲ್ಕು ಭಾವಚಿತ್ರಗಳನ್ನು ತೆಗೆಸಿದ್ದು, ಅವುಗಳನ್ನು ನಿಪಿ-4 ರಿಂದ 7 ಅಂತಾ ಗುರುತಿಸಲಾಯಿತು. ಘಟನೆಗೆ ಸಂಬಂಧಪಟ್ಟಂತೆ ಚಾಸಾ-7 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 04-11-2011 ರಂದು ಕಳುವಾದ ಮುದ್ದೆಮಾಲಿನ ಕುರಿತಾಗಿ ಚಾಸಾ-1 ಇವರ ಮರು ಹೇಳಿಕೆ ಪಡೆದಿರುತ್ತೇನೆ. ಫ್ರಾಸಾ-1 ಮತ್ತು ಇತರೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ 10-01-2011 ರಂದು ಚಾಸಾ-23 ಮತ್ತು ಸಿಬ್ಬಂದಿ ಜನರು ಪ್ರಕರಣದ ಇಬ್ಬರು ಆರೋಪಿತರನ್ನು ನನ್ನ ಮುಂದೆ ಹಾಜರಪಡಿಸಿದ್ದು, ಅವರ ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-16 ರಿಂದ 18 ರವರು ಆ ಬಗ್ಗೆ ಮೂರು ವರದಿ ನೀಡಿರುತ್ತಾರೆ. ಸಾಕ್ಷಿಯು ಮೂರು ವರದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-8 ರಿಂದ 10 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-8(ಎ) ದಿಂದ 10(ಎ) ಅಂತಾ ಗುರುತಿಸಲಾಯಿತು. ಆರೋಪಿತರನ್ನು ಗುರುತಿಸಿದ ಬಗ್ಗೆ ಎಲ್ಲ ಸಾಕ್ಷಿದಾರರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ಆರೋಪಿತರು ನೀಡಿದ ಸ್ವಖುಷಿ ಹೇಳಿಕೆಯ ಆಧಾರದ ಮೇರೆಗೆ ಅದೇ ದಿನ ಗುನ್ಹೆ ಉಪಯೋಗಿಸಿದ ಮೊಬೈಲನ್ನು ಆರೋಪಿ ರಾಮು ಈತನು ಮಾರಾಟ ಮಾಡಿದ ಅಂಗಡಿಯನ್ನುತೋರಿಸಿದ್ದು, ಅದನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಅಂಗಡಿ ಮಾಲಿಕ ಜಿತೇಂದ್ರ ಜಾಧವ್ ಇವರಿಂದ ಮೊಬೈಲನ್ನು ಜಪ್ತಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-11 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ನೋಕಿಯಾ ಕಂಪನಿಯ ಮೊಬೈಲನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು-2 ಅಂತಾ ಗುರುತಿಸಲಾಯಿತು.

ಆರೋಪಿತರು ನೀಡಿದ ಸ್ವಖುಷಿ ಹೇಳಿಕೆಯ ಆಧಾರದ ಮೇರೆಗೆ ಅದೇ ದಿನ ಗುನ್ಹೆ ಉಪಯೋಗಿಸಿದ ಮೊಬೈಲನ್ನು ಆರೋಪಿ ರಾಮು ಈತನು ಮಾರಾಟ ಮಾಡಿದ ಅಂಗಡಿಯನ್ನುತೋರಿಸಿದ್ದು, ಅದನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಅಂಗಡಿ ಮಾಲಿಕ ಜಿತೇಂದ್ರ ಜಾಧವ್ ಇವರಿಂದ ಮೊಬೈಲನ್ನು ಜಪ್ತಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-12 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ ಲೀ ಕಂಪನಿಯ ಮೊಬೈಲನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು-3 ಅಂತಾ ಗುರುತಿಸಲಾಯಿತು.

ದಿಃ 12-01-2012 ರಂದು ಸದರಿ ಮೊಬೈಲ್‌ಗಳ ಸಿ.ಡಿ.ಆರ್. ವರದಿಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-21 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 17-01-2012 ರಂದು ಪಿರ್ಯಾದಿ ಮತ್ತು ಇತರೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ 24-01-2012 ರಂದು ಮಾನ್ಯ ನ್ಯಾಯಾಲಯದ ಅನುಮತಿಯೊಂದಿಗೆ ತಹಶೀಲ್ದಾರ, ಹುನಗುಂದ ಇವರಿಗೆ ಗುರುತಿನ ಕವಾಯತು ನಡೆಸಲು ಪತ್ರ ಬರೆದುಕೊಂಡಿರುತ್ತೇನೆ. ಸದರಿಯವರು ಬಾಗಲಕೋಟೆ ಬಂದಿಖಾನೆಯಲ್ಲಿ ಆರೋಪಿತರ ಗುರುತಿನ ಕವಾಯತು ನಡೆಸಿ ನನಗೆ ವರದಿ ಸಲ್ಲಿಸಿರುತ್ತಾರೆ. ತಹಶೀಲ್ದಾರ ರವರು ನೀಡಿದ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-13 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಅಂತಾ ಗುರುತಿಸಲಾಯಿತು.

ದಿಃ 14-03-2012 ಎರಡು ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-14 ಮತ್ತು 15 ಅಂತಾ ಗುರುತಿಸಲಾಯಿತು. ಆರೋಪಿತರನ್ನು ನಾನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಅವರನ್ನು ನಾನು ನೋಡಿದರೆ ಗುರುತಿಸುತ್ತೇನೆ. ನಂತರ ದೋ.ಪ. ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.